ದಿನಾಂಕಃ **13-07-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ. ಹೆಚ್ ಎಂ ವಕೀಲರಿಂದಃ**

ದಾವಾ ಆಸ್ತಿ ಹೊನ್ನೇಗೌಡರ ಮಗ ಚೆನ್ನವೀರೆಗೌಡರಿಗೆ ಸೇರಿತ್ತು ಎಂದರೆ ಸರಿಯಲ್ಲ. ಮೊದಲಿಗೆ ದಾವಾ ಆಸ್ತಿ ಹೊನ್ನೇಗೌಡರವರಿಗೆ ಸೇರಿತ್ತು. ಚೆನ್ನವೀರೆಗೌಡರಿಗೆ 4 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಗಂಡು ಮಕ್ಕಳ ಹೆಸರು ಪುಟ್ಟಸ್ವಾಮಿ, ಶೇಖರ, ಶಿವರಾಮು ಮತ್ತು ರಮೇಶ ಎಂದರೆ ಸರಿ. ಹೆಣ್ಣು ಮಕ್ಕಳ ಹೆಸರು ಚಿಕ್ಕಮ್ಮ, ನಾಗಮ್ಮ ಮತ್ತು ಪುಟ್ಟತಾಯಮ್ಮ ಎಂದರೆ ಸರಿ. ಚಿಕ್ಕಮ್ಮ ಚೆನ್ನವೀರೆಗೌಡರ ಮೊದಲನೇ ಮಗಳು ಎಂದರೆ ಸರಿ. ಚಿಕ್ಕಮ್ಮ ರವರನ್ನು ಸಾದೊಳಲು ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ಚೆನ್ನವೀರೆಗೌಡರವರು ಚಿಕ್ಕಮ್ಮ ರವರನ್ನು ಬಡ ಕುಟುಂಬಕ್ಕೆ ಮದುವೆ ಮಾಡಿಕೊಟ್ಟಿದ್ದೇವೆ ಎಂದು ಒಂದು ಜಮೀನಿನ ಖಾತೆಯನ್ನು ಚಿಕ್ಕಮ್ಮ ರವರ ಹೆಸರಿಗೆ ಬದಲಾವಣೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ದಾವೆಯ 2 ಪ್ರತಿವಾದಿ ಚೆನ್ನವೀರೆಗೌಡರ ಮಗಳು ಎಂದರೆ ಸರಿ. ಚಿಕ್ಕಮ್ಮನ ಗಂಡ ಸಿದ್ದೇಗೌಡ ಎಂದರೆ ಸರಿ. ಸದರಿ ಚಿಕ್ಕಮ್ಮ ರವರಿಗೆ 3 ಗುಂಟೆ ಜಮೀನಿನ ಖಾತೆ ಆಗಿತ್ತು ಎಂದರೆ ಸರಿಯಲ್ಲ. ಸದರಿ ಚಿಕ್ಕಮ್ಮ ರವರಿಗೆ ಖಾತೆ ಆಗಿ ಸುಮಾರು 40 ವರ್ಷ ಆಗಿದೆ ಎಂದರೆ ಸರಿಯಲ್ಲ. ಅವರ ಹೆಸರಿಗೆ ಖಾತೆ ಆಗಿದ್ದ 3 ಗುಂಟೆ ಜಮೀನು ದಾವಾ ಆಸ್ತಿಯಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ.146/11 ರಲ್ಲಿ 3 ಗುಂಟೆ ಜಮೀನು ಚಿಕ್ಕಮ್ಮ ರವರ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ. ಚಿಕ್ಕಮ್ಮ ನವರ ತಂದೆ ಚೆನ್ನವೀರೆಗೌಡರು 1984 ರಲ್ಲಿ ಮೃತ ಪಟ್ಟಿರುತಾರೆ ಎಂದರೆ ಸರಿ. ಸದರಿ ಚಿಕ್ಕಮ್ಮ ರವರಿಗೆ 2008-09 ನೇ ಸಾಲಿನಲ್ಲಿ ಅವರ ಅಣ್ಣ ತಮ್ಮಂದಿರು ಎಲ್ಲಾರು ಒಪ್ಪಿ 3 ಗುಂಟೆ ಜಮೀನಿನ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ತಮ್ಮ ಎಂದರೆ ಸರಿ.

ನಿಪಿ-4 ದಾಖಲೆಯನ್ನು 2 ನೇ ಪ್ರತಿವಾದಿ 1 ನೇ ಪ್ರತಿವಾದಿರವರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಸದರಿ ಚಿಕ್ಕಮ್ಮ ರವರ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ, ಯಾವ ಆಧಾರದ ಮೇಲೆ ಬರೆದುಕೊಟ್ಟಿರುತಾರೆ ಎಂದು ಉತ್ತರಿಸುತಾರೆ. ಚೆನ್ನವೀರೆಗೌಡರು ಗೆಜ್ಜಲಗೆರೆ ಗ್ರಾಮಕ್ಕೆ ಸೇರಿದವರು

ಎಂದರೆ ಸರಿ. 2 ನೇ ಪ್ರತಿವಾದಿಯ ಗಂಡ ಈಗ ಜೀವಂತ ಇದ್ದಾರೆ. ಈ ದಾವೆಯನ್ನು ನಾನೇ ದಾಖಲು ಮಾಡಿಸಿರುತೆನೆ. ನಾನು ಈ ದಾವೆಯಲ್ಲಿ 2 ನೇ ಪ್ರತಿವಾದಿ ಮೃತಪಟ್ಟಿರುತಾರೆ ಎಂದು ತಿಳಿಸಿರುತೆನೆ. 2 ನೇ ಪ್ರತಿವಾದಿಯ ಗಂಡ ಮೃತಪಟ್ಟಿರುತಾರೆ ಎಂದರೆ ಸರಿಯಲ್ಲ. ಈಗ 2 ನೇ ಪ್ರತಿವಾದಿಯವರು ಗೆಜ್ಜಲಗೆರೆಯಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂಧಿಸಿದಂತೆ ಪ್ರತಿವಾದಿ 2 ರವರು ಪ್ರತಿವಾದಿ 1 ರವರಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಪೋರ್ಜರಿಯಾಗಿ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತಾರೆ. ನಾನು ಈ ಬಗ್ಗೆ

ಪೊಲೀಸ್ ಠಾಣೆಯಲ್ಲಿ ಮತ್ತು ಎಸ್‌ಪಿ ರವರಿಗೆ ದೂರು ದಾಖಲು ಮಾಡಿರುತೆನೆ, ಅವರು ಸಿವಿಲ್ ವ್ಯಾಜ್ಯ ಆದ ಕಾರಣ ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳುವಂತೆ ನನಗೆ ತಿಳಿಸಿರುತಾರೆ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯವರು ನೀಡಿರುವ ದಾನವನ್ನು ಸ್ವೀಕರಿಸಿ ಅವರ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿ ಪೊರ್ಜರಿ ಖಾತೆ ಆಗಿದೆ ಎಂದು ಉತ್ತರಿಸುತಾರೆ. ಖಾತೆಯನ್ನು ವಜಾಗೊಳಿಸುವಂತೆ ನಾನು ಎಸಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುವುದಿಲ್ಲ. 1 ನೇ ಪ್ರತಿವಾದಿಯ ಬಳಿ ಇದ್ದ ಸ್ವಾದೀನವನ್ನು ನೀವು ವಶಪಡಿಸಿಕೊಳ್ಳಲು ಪ್ರಯತ್ನ ಮಾಡಿದೀರಾ ಎಂದರೆ ಸಾಕ್ಷಿ ಅದರ ಸ್ವಾದಿನದಲ್ಲಿ ನಾವೇ ಇದ್ದೇವೆ ಎಂದು ಉತ್ತರಿಸುತಾರೆ. ದಾವಾ ಆಸ್ತಿಯಲ್ಲಿ ನಾವು ಸ್ವಾದಿನದಲ್ಲಿ ಇರುವ ಬಗ್ಗೆ ಯಾವುದೇ ದಾಖಲೆ ನೀಡಿರುವುದಿಲ್ಲ, ಆದರೆ ಸಾಕ್ಷಿ ಮುಂದುವರೆದು ನಾವೇ ಸ್ವಾದಿನದಲ್ಲಿ ಇದ್ದೇವೆ ಎಂದು ಉತ್ತರಿಸುತಾರೆ.

1 ನೇ ಪ್ರತಿವಾದಿ ದಾವಾ ಆಸ್ತಿಯ ಕಂದಾಯವನ್ನು ಪಾವತಿ ಮಾಡುತ್ತಿದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನೇ ಕಂದಾಯವನ್ನು ಪಾವತಿ ಮಾಡುತ್ತಿದ್ದೆನೆ. ನಾನು ಅದರ ಬಗ್ಗೆ ಯಾವುದೇ ದಾಖಲೆ ನೀಡಿರುವುದಿಲ್ಲ. ದಾವಾ ಆಸ್ತಿ ನಿಮಗೆ ಸೇರಿಲ್ಲದ ಕಾರಣ ನೀವು ಕಂದಾಯವನ್ನು ಪಾವತಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಆಸ್ತಿ ನಮ್ಮ ತಂದೆಯ ಹೆಸರಿನಲ್ಲಿರುವ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ದಾವಾ ಆಸ್ತಿ ನಿಮ್ಮ ತಂದೆ-ತಾಯಿಗೆ ಸೇರಿಲ್ಲ ಎಂದರೆ ಸಾಕ್ಷಿ ನಮಗೆ ಸೇರಿದೆ ಎಂದು ಉತ್ತರಿಸುತಾರೆ. 1 ನೇಪ್ರತಿವಾದಿ ಮೃತ ಪಟ್ಟ ನಂತರ ಅವರ ಮಕ್ಕಳು ದಾವಾ ಆಸ್ತಿಯ ಸಾಗುವಳಿ

ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಾಯಿ ಮತ್ತು ತಂದೆಯ ಹೆಸರು ಮತ್ತು 2 ನೇ ಪ್ರತಿವಾದಿ ಮತ್ತು ಅವರ ಗಂಡನ ಹೆಸರು ಒಂದೇ ಆಗಿರುವುದರಿಂದ ಅದರ ದುರುಪಯೋಗವನ್ನು ಪಡೆದು ದಾವಾ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದೀರಿ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಮೃತ ಪಟ್ಟು ಸುಮಾರು 20 ವರ್ಷಗಳು ಆಗಿದೆ. ನಮ್ಮ ತಂದೆಯವರು ಜೀವಿತಾವದಿಯಲ್ಲಿ ದಾವಾ ಆಸ್ತಿಯ ಮೇಲೆ ಯಾವುದೇ ವ್ಯವಹಾರಗಳನ್ನು ಮಾಡಿರುವುದಿಲ್ಲ. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ತಾಯಿಯವರು ದಾವಾ ಆಸ್ತಿಯ ಮೇಲೆ ಯಾವುದೇ ವ್ಯವಹಾರಗಳನ್ನು ಮಾಡಿರುವುದಿಲ್ಲ. ನೀವು ಸಾಧ್ಯವಾದರೆ ಪ್ರತಿವಾದಿಗಳಿಂದ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ